**ದಿನಾಂಕ 23-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ-**

1. ಆಸ್ತಿಯು ನನ್ನ ಮುತ್ತಾತನ ಕಾಲದಿಂದಲೂ ಅವರ ಹೆಸರಿನಲ್ಲಿ ಬಂದಿದೆ, ಯಾವ ವರ್ಷದಲ್ಲಿ ಬಂದಿದೆ ಎಂಬುದು ನನಗೆ ಗೊತ್ತಿಲ್ಲ. ನನ್ನದು ಸರ್ವೆ ನಂ.325 ರಲ್ಲಿ 2 ನೇ ಹಿಸ್ಸಾ. ನನ್ನ ಹೆಸರಿನಲ್ಲಿ 25 ಗುಂಟೆ ಜಮೀನು ಇದೆ. ಹಿಸ್ಸಾ ನಂ.2 ರಲ್ಲಿ 5 ಜನ ಇದ್ದಾರೆ. ಅವರ ಹೆಸರುಗಳು ಹೊನ್ನೂರ್ ಸಾಬ್, ಖಾಜಾಸಾಬ್, ನಬೀಸಾಬ್, ಬುಡ್ಡಪ್ಪ & ದಾದಾ ಸಾಬ್. ನಿಮಗೆ ಖಚಿತ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ಹಿಸ್ಸಾ-2 ರಲ್ಲಿ ಸೂರ್ಯರಾವ್, ವೆಂಕಟಪ್ರಕಾಶ್, ರಾಮಬಾಬು, ಅಮೀನ್ ಸಾಬ್, ವೇಣಿ ವೆಂಕಟೇಶ್ವರರಾವ್, ಕೆ ವೆಂಕಟಪ್ರಸಾದ್ ತಂದೆ ಭಾಸ್ಕರ್ ರಾವ್, ಶೇಷಾರತ್ನಂ ರವರೂ ಸಹ ಇದ್ದಾರೆ ಎಂದರೆ ಸಾಕ್ಷಿಯು ಇರಬಹುದು ನನಗೆ ಗೊತ್ತಿಲ್ಲ, ಮಾಹಿತಿ ಇಲ್ಲ ಎನ್ನುತ್ತಾರೆ. ನಿಮಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನಾನು ಇರುವುದು ಮಾತ್ರ ಗೊತ್ತು ಎನ್ನುತ್ತಾರೆ.

2. ಹಿಸ್ಸಾ ನಂ.1 ಕ್ಕೆ ಹೊಂದಿಕೊಂಡು ಹಿಸ್ಸಾ 2 ಇದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಹಿಸ್ಸಾ ನಂ.1 ರಲ್ಲಿ ಕೆ ಉಮಾ, ರಾಮಬಾಬು, ದಾಮಿನಿ ರಾಮ್ ಬಾಬ್, ಕೆ ಕಟ್ಟಿಪುಡಿ ಅನಂತಲಕ್ಷ್ಮೀ, ಹೊನ್ನೂರ್ ಸಾಬ್, ಮೇಗಿ ವೆಂಕಟೇಶ್ವರ ರಾವ್ ರವರು ಇದ್ದಾರೆ ಎಂದರೆ ಸರಿ. ಸದರಿಯವರು ಅವರವರ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ನಿಮ್ಮ ಜಮೀನಿನ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

3. ನಾವು ಪ್ರತಿವಾದಿಗಳೆಲ್ಲರೂ ಚಿಕ್ಕ ದೊಡ್ಡಪ್ಪನ ಮಕ್ಕಳಿರುತ್ತೇವೆ. ನಮ್ಮ ಕುಟುಂಬಕ್ಕೆ ಒಟ್ಟು 4 ಎಕರೆ 9 ಗುಂಟೆ ಜಮೀನು ಇರುತ್ತದೆ. ಅದರಲ್ಲಿ ನಾನು 25 ಗುಂಟೆ ಜಮೀನಿಗೆ ಮಾತ್ರ ಇರುತ್ತೇನೆ. ನಮಗೆಲ್ಲರಿಗೂ ಪಹಣಿ ಪ್ರಕಾರ ತಲಾ 25 ಗುಂಟೆ ಜಮೀನು ಇರುತ್ತದೆ, ಆದರೆ ವಾಸ್ತವವಾಗಿ ಜಾಸ್ತಿ ಇರುತ್ತದೆ, ಆದರೆ ನಾವು ಇನ್ನೂ ನಮ್ಮ ಹೆಸರಿಗೆ ಮಾಡಿಸಿಕೊಂಡಿಲ್ಲ ಎನ್ನುತ್ತಾರೆ.

4. ನಾನು ಹೊಲವನ್ನು ಅಳತೆ ಮಾಡಿಸಿಲ್ಲ. ನಿಮಗೆ ಹೊಲ ಜಾಸ್ತಿ ಬರುತ್ತದೆ ಎಂದು ಹೇಳಿ ವಾದಿಯ ಸ್ವಾಧೀನಕ್ಕೆ ತೊಂದರೆ ಮಾಡಿರುತ್ತೀರಿ ಎಂದರೆ ಸರಿಯಲ್ಲ.

5. ವಾದಿಯೂ ಹಿಸ್ಸಾ ನಂ.1 ರ ಸ್ವಾಧೀನದಲ್ಲಿದ್ದಾರೆ, ನೀವು ಹಿಸ್ಸಾ ನಂ.2 ರಲ್ಲಿ ಸ್ವಾಧೀನದಲ್ಲಿದ್ದೀರಿ ಎಂದರೆ ಸಾಕ್ಷಿಯು ಅವರು ಈಗಾಗಲೇ ಆಸ್ತಿಯನ್ನು ಮಾರಾಟ ಮಾಡಿ ಹೋಗಿರುತ್ತಾರೆ ಎನ್ನುತ್ತಾರೆ. ಅವರು ಯಾರು ಯಾರಿಗೆ ಎಷ್ಟೆಷ್ಟು ಆಸ್ತಿಯನ್ನು ಮಾರಾಟ ಮಾಡಿ

ಹೋಗಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿ ವಾದಿಗೆ ಆಕೆಯ ತಂದೆಯ ಕಡೆಯಿಂದ ಬಂದ ಆಸ್ತಿ ಎಂದರೆ ಸರಿ.

6. ನೀವು ವಾದಿಯ ಆಸ್ತಿಯಲ್ಲಿ ಅತಿಕ್ರಮಣ ಪ್ರವೇಶ ಮಾಡಿದ್ದರಿಂದ ಆಕೆ ಈ ದಾವೆ ಹೂಡಿದ್ದಾಳೆ ಎಂದರೆ ಸರಿಯಲ್ಲ.

7. ನಿಮ್ಮ ತಾತ ಮುತ್ತಾನ ಕಾಲದಿಂದ ನಿಮಗೆ 4 ಎಕರೆ 9 ಗುಂಟೆ ಜಮೀನು ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಮಾಲೀಕರು & ಸ್ವಾಧೀನದಾರರು ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

8. ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಹೇಳಿಕೆ ಹಾಕಿದ್ದೇನೆ. ನೀವು ಲಿ.ಹೇಳಿಕೆ ಹಾಕಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**